O.S.9/2020
ಪಿ ಡಬ್ಲ್ಯೂ-1

**ಸಾಕ್ಷಿಯನ್ನು ದಿನಾಂಕ 11-02-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ BLN ವಕೀಲರಿಂದಃ**

**1.** ನನ್ನ ತವರು ಮನೆ ಗೌರಿಬಿದನೂರು. ಪ್ರತಿವಾದಿ ಯಾರೆಂದು ನನಗೆ ಗೊತ್ತಿಲ್ಲ. ಪ್ರತಿವಾದಿ ತಂದೆ ಹಾಗೂ ನನ್ನ ತಂದೆ ಸಹೋದರರು ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣವನ್ನು ಯಾರ ವಿರುದ್ಧ ಸಲ್ಲಿಸಿರುತ್ತೇನೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಈ ಪ್ರಕರಣವನ್ನು ಏನು ಪರಿಹಾರಕ್ಕಾಗಿ ಸಲ್ಲಿಸಿರುತ್ತೇನೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆಸಿರುವ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಕೆ ಬಿ ನಾಗರಾಜಯ್ಯರವರು ಪ್ರತಿವಾದಿಯನ್ನು ಯಾವಾಗ ಮದುವೆ ಆಗಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ, ನನ್ನಿಂದ ಹೆಚ್ಚುಮಾತನಾಡಲು ಆಗುವುದಿಲ್ಲ. ನನ್ನ ಮದುವೆ ಎಷ್ಟು ವರ್ಷಗಳ ಹಿಂದೆ ಜರುಗಿದೆ ಎಂದು ನನ್ನಿಂದ ಹೇಳಲಾಗುವುದಿಲ್ಲ. ನಾನು ನನ್ನ ಗಂಡನಿಗೆ ಯಾವುದೇ ಹಕ್ಕು ಬಿಡುಗಡೆ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ, ನಾನು ನನ್ನ ಗಂಡ ಅವರ ಜೀವಿತಾವಧಿವರೆಗೂ ಒಟ್ಟಿಗೆ ವಾಸ ಮಾಡುತ್ತಿದ್ದೆವು. ನನಗೆ ಕಾಯಿಲೆ ಇದ್ದು ನಾನು ನನ್ನ ಗಂಡನಿಂದ ಹಣ ಮತ್ತು ಆಭರಣಗಳನ್ನು ಪಡೆದುಕೊಂಡು ಅವರು ಇನ್ನೊಂದು ಮದುವೆ ಮಾಡಿಕೊಳ್ಳಬಹುದು ಎಂದು ನಾನು ದಿಃ **01.12.1978** ರಲ್ಲಿ ನನ್ನ ಗಂಡನಿಗೆ ಬಿಡುಗಡೆ ಪತ್ರವನ್ನು ಬರೆದುಕೊಟ್ಟಿರುತ್ತೇನೆಂದರೆ ಸರಿಯಲ್ಲ.

**2.** ನನ್ನ ಹಾಗೂ ಪ್ರತಿವಾದಿ ವಿರುದ್ಧ ನನ್ನ ಮಕ್ಕಳು ದಾವೆಯನ್ನು ಸಲ್ಲಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನಿಗೆ ಯಾವಾಗ ಕೆಲಸ ಸಿಕ್ಕಿರುತ್ತದೆ ಎಂದು ನನಗೆ ಗೊತ್ತಿಲ್ಲ, ನಾನು ಬ್ಗಿದ ನಂತರ ನನ್ನ ಗಂಡನಿಗೆ ಕೆಲಸ ಸಿಕ್ಕಿರುತ್ತದೆ. ನಾನು ಬಿಡುಗಡೆ ಪತ್ರ ಬರೆದುಕೊಟ್ಟ ನಂತರ ನನ್ನ ಗಂಡ ಪ್ರತಿವಾದಿಯನ್ನು ಕಾನೂನುಬದ್ಧವಾಗಿ ವಿವಾಹಮಾಡಿಕೊಂಡಿರುತ್ತಾರೆಂದರೆ, ನಾನು ಯಾವುದೇ ಬಿಡುಗಡೆ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ನಾನೇ ಮುಂದೆ ನಿಂತು ನನ್ನ ಗಂಡ ಹಾಗೂ ಪ್ರತಿವಾದಿಯ ಮದುವೆಯನ್ನು ಮಾಡಿಸಿರುತ್ತೇನೆಂದರೆ, ಮದುವೆ ಆಗಿರುವುದೇ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ ನನ್ನ ಚಿಕ್ಕಪ್ಪನ ಮಗಳಾಗಿದ್ದು ನಾನೇ ಅವರು ಮತ್ತು ನನ್ನ ಗಂಡನ ಮದುವೆಯನ್ನು ಮಾಡಿಸಿದ್ದರೂ ನನಗೆ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪ್ರತಿವಾದಿಯನ್ನು ಮದುವೆ ಮಾಡಿಕೊಂಡ ನಂತರ ನನ್ನ ಗಂಡನಿಗೆ ಕೆಲಸ ಸಿಕ್ಕಿರುತ್ತದೆ ಎಂದರೆ ಸರಿಯಲ್ಲ. **1981** ನೇ ಸಾಲಿನಲ್ಲಿ ನನ್ನ ಗಂಡನಿಗೆ ಕೆಲಸ ಸಿಕ್ಕಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ಪ್ರತಿವಾದಿಯನ್ನು **1978-79** ಸಾಲಿನಲ್ಲಿ ಮದುವೆ ಆಗಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ಬಿಡುಗಡೆ ಪತ್ರವನ್ನು ಬರೆದುಕೊಟ್ಟ ನಂತರ ನಾನು ಕೊರಟಗೆರೆಯಲ್ಲಿ ಬೇರೆ ವಾಸ ಮಾಡುತ್ತಿದ್ದೆ ಎಂದರೆ, ನಾನು ಮತ್ತು ನನ್ನ ಗಂಡ ಒಟ್ಟಿಗೆ ವಾಸ ಮಾಡುತ್ತಿದ್ದೆವು. ಕೊರಟಗೆರೆಯ ತ್ರಿಯಂಬಕೇಶ್ವರ ಕಾಲೋನಿಯಲ್ಲಿ ನನ್ನ ಗಂಡ ನನಗೆ ಎರಡು ಮನೆಯನ್ನು ಕೊಡಿಸಿರುತ್ತಾರೆಂದರೆ ಸರಿ. ಸದರಿ ಮನೆಗಳಲ್ಲಿ ನಾನು ವಾಸ ಮಾಡುತ್ತಿರುತ್ತೇನೆಂದರೆ ಸರಿ. ನಾನು ಬಿಡುಗಡೆ ಪತ್ರವನ್ನು ಬರೆದುಕೊಟ್ಟ ನಂತರ ನಾನು ಮತ್ತು ನನ್ನ ಗಂಡ ವಿವಾಹ ವಿಚ್ಛೇದನ ಪಡೆದ ರೀತಿಯಲ್ಲಿ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೆವೆಂದರೆ ಸರಿಯಲ್ಲ.

**3.** ಪ್ರತಿವಾದಿಗೆ ಎಷ್ಟು ಜನ ಮಕ್ಕಳೆಂದು ನನಗೆ ಗೊತ್ತಿಲ್ಲ. ಪ್ರತಿವಾದಿಯನ್ನು ಮದುವೆ ಆದ ನಂತರ ನನ್ನ ಗಂಡನಿಗೆ ಕೆಲಸ ಸಿಕ್ಕಿರುವ ಕಾರಣ ಅವರ ಸೇವಾ ಅವಧಿ ಪುಸ್ತಕದಲ್ಲಿ ನನ್ನ ಗಂಡ ಮತ್ತು ಪ್ರತಿವಾದಿಗೆ ಜನಿಸಿದ ಮಕ್ಕಳ ಹೆಸರುಗಳನ್ನು ಸೇರಿಸಿರುತ್ತಾರೆಂದರೆ ಸರಿಯಲ್ಲ. ನನ್ನ ಗಂಡ ಮತ್ತು ಪ್ರತಿವಾದಿಗೆ ನಾಗರತ್ನ, ಅನ್ನಪೂರ್ಣ, ಶಶಿಕಲಾ ಮತ್ತು ದೇವರಾಜ್ ಎಂಬ **4** ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ನನಗೆ ಲಿಲಾವತಿ ಮತ್ತು ಲತಾ ಎಂಬ ಇಬ್ಬರು ಮಕ್ಕಳು. ನನ್ನ ಗಂಡ ನಾಗರಾಜ್ ಮತ್ತು ಪ್ರತಿವಾದಿ ಸೇರಿಕೊಂಡು ನನ್ನ ಇಬ್ಬರ ಮಕ್ಕಳ ಮದುವೆಯನ್ನು ಮಾಡಿರುತ್ತಾರೆಂದರೆ ಸರಿಯಲ್ಲ. ನನ್ನ ಆರೋಗ್ಯ ಸರಿ ಇಲ್ಲದ ಕಾರಣ ಅವರೇ ನನ್ನ ಮಕ್ಕಳ ಮದುವೆಗಳನ್ನು ಮಾಡಿರುತ್ತಾರೆಂದರೆ ಸರಿಯಲ್ಲ. **1978** ನೇ ಸಾಲಿನಿಂದ ನಾನು ನನ್ನ ಗಂಡನ ಕಾನೂನುಬದ್ದ ಹೆಂಡತಿ ಆಗಿರುವುದಿಲ್ಲ, ಆ ಕಾರಣ ನಾನು ಈ ದಾವೆಯಲ್ಲಿ ಕೇಳಿರುವಂತೆ ಪರಿಹಾರವನ್ನು ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ಗಂಡನ ಕಾನೂನುಬದ್ದ ಹೆಂಡತಿ ಆಗಿರುವ ಕಾರಣ ನನಗೆ ನನ್ನ ಗಂಡನ ನಿವೃತ್ತಿ ಪಿಂಚಣಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ವ್ಯಕ್ತಿಯೇ ಪ್ರತಿವಾದಿಯ ಮಗ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಕ್ಕಳ ಅಪೇಕ್ಷೆಯ ಮೇರೆಗೆ ನಾನು ಈ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನನ್ನ ಗಂಡ **10** ವರ್ಷಗಳ ಹಿಂದೆ

ತೀರಿಕೊಂಡಿರುತ್ತಾರೆ. ನನ್ನ ಗಂಡನ ಜೀಳಿತಾವಧಿಯಲ್ಲಿ ನನ್ನ ಮಕ್ಕಳು ದಾವೆಯನ್ನು ದಾಖಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು ವಕೀಲರನ್ನು ಆಯ್ಕೆ ಮಾಡಿಕೊಂಡಿರುತ್ತೇನೆಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಯಿಂದ ಅಕ್ರಮವಾಗಿ ಲಾಭವನ್ನು ಪಡೆಯುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S.9/2020
ಪಿ ಡಬ್ಲ್ಯೂ-1

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: **10-09-2025**

Civil Judge and JMFC.
*Koratagere.*